ಅಧ್ಯಾಯ - ೬

# ಸಮಾರೋಪ

## ಅಧ್ಯಾಯ :೬

# ಸಮಾರೋಪ

ಕುವೆಂಪು ಅವರ ಸಾಹಿತ್ಯದಲ್ಲಿ ಸನಾತನತೆಯ ವಿದಾಯ ಮತ್ತು ಆಗಮನದ ನಿರ್ಮಾಣದ ದ್ವಂದ್ವಗಳು ಸರಳರೂಪದ್ದಲ್ಲ ವಸಾಹತುಶಾಹಿ ಮತ್ತು ಆಧುನಿಕತೆ, ಸನಾತನತೆ- ಹಳೆಯ ಸಮಾಜ- ಈ ಎಲ್ಲವೂ ಒಂದೇ ಅರ್ಥವನ್ನು ಹೊಂದಿಲ್ಲವಾದರೂ ಒಂದು ಮಾದರಿಯ ಸಾಮರಸ್ಯವನ್ನು, ವೈರುಧ್ಯವನ್ನು ಇಟ್ಟುಕೊಂಡಿರುವುದರಿಂದ ಕುವೆಂಪು ಸಾಹಿತ್ಯವನ್ನೆ ಕೇಂದ್ರವಾಗಿರಿಸಿಕೊಂಡು ನಡೆಸಿರುವ ಅಧ್ಯಯನದಲ್ಲಿ ಈ ಕೆಲವು ಅಂಶಗಳು ಪ್ರಮುಖವಾಗಿ ಗಮನ ಸೆಳೆದಿವೆ.

ಕುವೆಂಪು ಅವರು ಸೃಜನಶೀಲ ಚಟುವಟಿಕೆಯಲ್ಲಿ ತೊಡಗಿರುವುದು ವಸಾಹತುಶಾಹಿ ಸಂದರ್ಭದಲ್ಲಿ. ಈ ಸಂದರ್ಭದಲ್ಲಿ ಸಾಂಸ್ಕೃತಿಕವಾಗಿ ಅನೇಕ ಬದಲಾವಣೆಗೊಳಗಾಗಿದ್ದನ್ನು ನಾವು ಕಾಣುತ್ತೇವೆ. ಹಳೆ ಸಮಾಜ ಮತ್ತು ಹೊಸ ಸಮಾಜದ ಅನೇಕ ಬಿಕ್ಕಟ್ಟುಗಳು ಹಾಗೂ ಸಾಂಸ್ಕೃತಿಕ ಪರಿವರ್ತನೆಗಳು ಈ ಕಾಲಘಟ್ಟದಲ್ಲಿ ಕಾಣಿಸಿಕೊಂಡವು. ಇದಕ್ಕಾಗಿಯೆ ವಸಾಹತು ಪೂರ್ವದ ಚಿಂತನೆಯ ಕ್ರಮಗಳನ್ನು ಸನಾತನವೆಂದು ವಸಾಹತುಶಾಹಿ ಅನುಭವದ ಸಂದರ್ಭದಲ್ಲಿ ಬಂದ ಚಿಂತನಾ ಕ್ರಮವನ್ನು ಆಧುನಿಕವಾಗಿ ಪರಿಭಾವಿಸಲಾಗಿದೆಯಾದರೂ ಕುವೆಂಪು ಅಂತವರು ಈ ರೀತಿಯ ಸಾಂಸ್ಕೃತಿಕ ಪಲ್ಲಟವನ್ನು ಎದುರಿಸಿದ ಕ್ರಮವನ್ನು ಅಧ್ಯಯನ ನಡೆಸುವುದಕ್ಕೆ ಪೂರಕವಾಗಿ ಆಗಮನ ಮತ್ತು ವಿದಾಯ ಎಂಬ ಪರಿಕಲ್ಪನೆಯಲ್ಲಿ ಇಲ್ಲಿ ಚರ್ಚಿಸಲಾಗಿದೆ.

ಕುವೆಂಪು ಅವರ ಸಾಹಿತ್ಯದಲ್ಲಿ ಆಧುನಿಕತೆ ಎನ್ನುವುದು ಹಳೆಯ ಸಮಾಜಕ್ಕಿಂತ ವ್ಯತಿರಿಕ್ತವಾದರೂ ಅದು ಕೆಲವು ಬದಲಾವಣೆಯನ್ನು ತರುತ್ತದೆ ಎಂದು ಈ ಅಧ್ಯಯನದಲ್ಲಿ ಗುರಿತಿಸಲಾಗಿದೆ. ಇದಕ್ಕೆ ಪೀಠಿಕೆಯಾಗಿ ವಸಾಹತುಶಾಹಿ ಅನುಭವದ ಸಂದರ್ಭ, ಹೊಸ ಶಿಕ್ಷಣ ನೀತಿ ಹಾಗೂ ರೂಪುಗೊಂಡ ರಾಷ್ಟ್ರೀಯ ಆಂದೋಲನದಲ್ಲಿ ಲೇಖಕರು ತಳೆದ ಪ್ರಾದೇಶಿಕತೆಯ ಆಸಕ್ತಿ

ಮುಂತಾದ ಅಂಶಗಳನ್ನು ವಿವರಿಸಲಾಗಿದೆ. ಲೇಖಕ ಒಬ್ಬನೇ ಆದರೂ ಅವನ ಹಿನ್ನಲೆಯಲ್ಲಿ ಇರುವ ಅನೇಕ ಅಂಶಗಳನ್ನು ಇಲ್ಲಿ ಪ್ರಸ್ತಾವಿಸಲಾಗಿದೆ.

ಕುವೆಂಪು ಅವರ ಬರಹಗಳಲ್ಲಿ ಎದ್ದು ಕಾಣುವ ಪ್ರಾದೇಶಿಕತೆಯು ಕೂಡಾ ಆ ಸಂದರ್ಭದ ಪರಿವರ್ತನೆ ಮತ್ತು ದ್ವಂದ್ವಗಳನ್ನು ನಮ್ಮ ಎದುರು ಇಡುತ್ತದೆ. ಈ ದೃಷ್ಟಿಯಿಂದ ಕುವೆಂಪು ಅವರಲ್ಲಿ ಪ್ರಾದೇಶೀಕತೆಗೆ ವಿಶಿಷ್ಟ ಅರ್ಥವಿದೆ. ಮಲೆನಾಡನ್ನು ಕೇಂದ್ರವಾಗಿರಿಸಿಕೊಂಡು ಅದರಲ್ಲಿ ಉಂಟಾದ ಪರಿವರ್ತನೆಯನ್ನು ಕುವೆಂಪು ಸಮರ್ಥವಾಗಿ ಬಿಂಬಿಸುತ್ತಾರೆ.

ಕುವೆಂಪು ಅವರ ಸಾಹಿತ್ಯದಲ್ಲಿ ಬರುವ ಸನಾತನತೆಯು ಕೂಡ ಒಂದೇ ಕೇಂದ್ರಿತ ವೈಚಾರಿಕ ಚೌಕಟ್ಟಿನಿಂದ ಒಡಮೂಡಿರುವಂತಹದಲ್ಲ. ಈ ದೃಷ್ಟಿಯಿಂದ ಕುವೆಂಪು ಅವರ ಹೊಸ ಸಮಾಜದಲ್ಲಿ ಸನಾತನವಾದ ವಿಚಾರಗಳು ಹೇಗೆ ಪ್ರಸ್ತುತವಾಗುತ್ತವೆ. ಎಂದು ಕುವೆಂಪು ಸಮರ್ಥವಾಗಿ ಪ್ರತಿಪಾದಿಸುತ್ತಾರೆ.

ಕುವೆಂಪು ಅವರ ಬರವಣಿಗೆಯಲ್ಲಿ ಪ್ರಭುತ್ವದ ವಿರೋಧವನ್ನು, ಭಾಷೆ ಮತ್ತು ಸಂಸ್ಕೃತಿ ಈ ಎರಡೂ ನೆಲೆಗಳಿಂದ ಗುರುತಿಸುವುದಷ್ಟೇ ಅಲ್ಲ ಅದರ ಹಿನ್ನೆಲೆಯಲ್ಲಿರುವ ಚಿಂತನೆಯನ್ನು ಸಮರ್ಥವಾಗಿ ಗುರುತಿಸುವ ಪ್ರಯತ್ನ ಮಾಡಿದ್ದಾರೆ.

ಕುವೆಂಪು ಅವರಲ್ಲಿ ಬರುವ ದೇಶೀವಾದ, ಉದಾರವಾದಿ ನಿಲುವುಗಳು ಅವರ ಶೈಕ್ಷಣಿಕ ಸ್ವರೂಪಗಳು ಸಮ್ಮಿಶ್ರ ಸ್ವರೂಪಗಳಾಗಿದ್ದು ಅದರಲ್ಲಿ ಉದಾರತೆ ಮತ್ತು ಸಮನ್ವಯಗಳನ್ನು ಕಾಣಬಹುದಾಗಿದೆ.

ಕುವೆಂಪು ಅವರ ವಿಶ್ವಾತ್ಮಕ ಮೌಲ್ಯದ ಪರಿಕಲ್ಪನೆ ಮತ್ತು ವಿಚಾರಕ್ರಾಂತಿ ಕನ್ನಡ ವಿಮರ್ಶಾವಲಯದಲ್ಲಿ ಜನಪ್ರಿಯವಾಗಿದ್ದರೂ ಅದರ ಹಿನ್ನಲೆಯಲ್ಲಿ ಕುವೆಂಪು ಅವರ ವೈಚಾರಿಕ ಚಿಂತನೆಯು ಸಮರ್ಥವಾಗಿ ವ್ಯಕ್ತವಾಗಿದೆ.

ವಸಾಹತುಶಾಹಿಯ ಆಡಳಿತ ಇಲ್ಲಿ ಕೈಗೊಂಡ ಆಡಳಿತ ಸುಧಾರಣೆ, ಸಾರಿಗೆ, ಶಿಕ್ಷಣ ಇತ್ಯಾದಿ ಸುಧಾರಣಾ ಕ್ರಮವು ನಮ್ಮ ಸಮಾಜ ಚಿಂತಕರ, ಬರಹಗಾರರ ಮೇಲೆ ಉಂಟುಮಾಡಿದ ಬದಲಾವಣೆಯಿಂದ ಪಾರಂಪರಿಕ ನಂಬಿಕೆಗಳನ್ನು ಹೊಸ ದೃಷ್ಟಿಕೋನದಿಂದ ನೋಡಲು ಸಾಧ್ಯವಾಯಿತು. ಈ ರೀತಿಯ ಬದಲಾವಣೆಗಳು ಮಲೆನಾಡಿನ ಪರಿಸರದಲ್ಲಿ ಉಂಟುಮಾಡಿದ ಬದಲಾವಣೆ ಹಾಗೂ ಜಾಗೃತಿಯನ್ನು ಕುವೆಂಪು ಸಾಹಿತ್ಯದ ಹಿನ್ನೆಲೆಯಲ್ಲಿ ಗ್ರಹಿಸಲಾಗಿದೆ.

ಕುವೆಂಪು ಅವರ ಶ್ರೀರಾಮಾಯಣದರ್ಶನಂ ಮಹಾಕಾವ್ಯವನ್ನು ಇಟ್ಟುಕೊಂಡು ಈ ರೀತಿಯ ಅಧ್ಯಯನ ಮಾಡಲು ಸಾಧ್ಯವಿದೆ. ಕುವೆಂಪು ಅವರಂತೆ ಶಿವರಾಮಕಾರಂತ. ಬೇಂದ್ರೆ, ಮಾಸ್ತಿ, ಅನಂತಮೂರ್ತಿ ಮೊದಲಾದ ಎಲ್ಲಾ ಬರಹಗಾರರು ಈ ರೀತಿಯ ಸಮಸ್ಯೆಯನ್ನು ಎದುರಿಸಿದ್ದಾರೆ. ಅವರನ್ನು ಪತ್ಯೇಕವಾಗಿ ಚರ್ಚಿಸುವುದರ ಮುಖಾಂತರ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಹೊಸ ರೀತಿಯ ವಾಗ್ವಾದವನ್ನು ರೂಪಿಸಲು ಸಾಧ್ಯವಿದೆ.

ಸನಾತನ ಸಮಾಜ ಸಂಪೂರ್ಣವಾಗಿ ನಿರ್ನಾಮವಾಗಿಲ್ಲ ಮತ್ತು ತೀರಾ ಆಧುನಿಕ ಸಮಾಜವು ಸೃಷ್ಟಿಯಾಗಿಲ್ಲ. ಇದರ ನಡುವೆ ಬರೆಯುವ ಎಲ್ಲಾ ಲೇಖಕರು ಈ ರೀತಿಯ ವೈರುಧ್ಯಗಳಿಂದಲೇ ಬರೆಯುವುದರಿಂದ. ಈ ಮಾದರಿಯ ಅಧ್ಯಯನಕ್ಕೆ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ವಿಪುಲವಾದ ಅವಕಾಶವಿದೆ.